



ದಾನವಾಗಿ ನೀಡಿದ. ಈ ರಮಣೀಯ ತಾಣಕ್ಕೆ ತೆರಳುವ ಪ್ರವಾಸಿಗರು ಬೆಳ್ಳಿಯ ಆನೆಯನ್ನು ಅದರ ಬೆನ್ನ ಮೇಲೆ ಅರಸ ಬರೆಸಿದ ಶಾಸನವನ್ನು ವೀಕ್ಷಿಸಬಹುದು.

ದೇವಾಲಯದ ಗರ್ಭಗೃಹವು ಚೌಕವಾಗಿದ್ದು ಒಳಗೆ ಪ್ರಾಚೀನ ಪಾಣಿಪೀಠದ ಮೇಲೆ ಇಗ್ಗುತ್ತಪ್ಪನ ಶಿಲಾವಿಗ್ರಹವಿದೆ. ಬಲಬದಿಯಲ್ಲಿ ಶಾಸನ ವಿರುವ ಬೆಳ್ಳಿಯ ಆನೆ ಹಾಗೂ ಎಡಬದಿಯಲ್ಲಿ ಇಗ್ಗುತ್ತಪ್ಪನ ಉತ್ಸವ ಮೂರ್ತಿ ಯಿದೆ. ಮೂಲವಿಗ್ರಹಕ್ಕೆ ಅತ್ಯಂತ ಸೂಕ್ಷ್ಮ ಕೆತ್ತನೆಯುಳ್ಳ ಬೆಳ್ಳಿಯ ಪ್ರಭಾವಳಿ ಹಾಗೂ ಅದರ ಮೇಲ್ಭಾಗದಲ್ಲಿ ತನ್ನ ಐದು  ಹೆಡೆ ಎತ್ತಿರುವ ಸುಂದರ ನಾಗಶಿಲ್ಪದ ಕೆತ್ತನೆಯಿದೆ. ಪಾಣಿಪೀಠದ ಮೂಲಭಾಗದಲ್ಲಿ ಹಂಸ ಹಾಗೂ ಹೂಬಳ್ಳಿಗಳ ಕೆತ್ತನೆಯ ಸುಂದರ ಅಲಂಕಾರವಿರುವ ಬೆಳ್ಳಿಯ ತಗಡಿನ ಕವಚವು ಆಕರ್ಷಕವಾಗಿದೆ. ಈ ಸುಂದರ ದೇವಾಲಯವು ಅಪ್ಪಾರಂಡ ಬೋಪು ಎಂಬ ಅಧಿಕಾರಿಯಿಂದ ಕ್ರಿ.ಶ 183435ರ ಅವಧಿಯಲ್ಲಿ ನವೀ ಕರಿಸಲ್ಪಟ್ಟಿದ್ದು ಅದೇ ಸಂದರ್ಭದಲ್ಲಿ ಗೋಪುರಕ್ಕೆ ಸುವರ್ಣ ಕಲಶವನ್ನು ಮಾಡಿಸಿದ ಬಗೆಗೆ ಉಲ್ಲೇಖವಿದೆ. ವರ್ಷದ ಎಲ್ಲಾ ದಿನಗಳಲ್ಲೂ ಈ ದೇವಾ ಲಯದಲ್ಲಿ ಪೂಜೆ ಸಲ್ಲಿಸಲಾಗುತ್ತದೆ. ಸೌಲಭ್ಯಗಳಿಗೂ ಕೊರತೆಯಿಲ್ಲ. ಸುತ್ತಲಿನ ನಿಸರ್ಗ ಸೌಂದರ್ಯ ಸವಿದಷ್ಟೂ ಸಾಕೆನಿಸುವುದಿಲ್ಲ. ನಿತ್ಯ ದೇವಾ ಲಯಕ್ಕೆ ಆಗಮಿಸುವ ಭಕ್ತ ಸಮೂಹಕ್ಕೆ ಮಧ್ಯಾಹ್ನ ಊಟದ ವ್ಯವಸ್ಥೆ ಇದೆ.

ಇಲ್ಲಿನ ಕಲ್ಲಡ್ಚ ಹಬ್ಬ ತುಂಬಾ ಪ್ರಸಿದ್ಧ. ಮಾರ್ಚ್ ತಿಂಗಳಲ್ಲಿ ಆಚರಿಸಲ್ಪಡುವ ಈ ಹಬ್ಬ ಸಹಸ್ರಾರು ಭಾವುಕರನ್ನು ಆಕರ್ಷಿಸುತ್ತದೆ. ಹಬ್ಬದ ಸಂದರ್ಭದಲ್ಲಿ ಇಗ್ಗುತ್ತಪ್ಪನ ಕೃಪೆಯಿಂದ ತಕ್ಕಷ್ಟು ಮಳೆಯೂ ಆಗುತ್ತದೆ. ಇಲ್ಲಿಗೆ ಸಮೀಪದ ನೆಲಜಿಪಾಡಿ ಎಂಬಲ್ಲಿ ಇಗ್ಗುತ್ತಪ್ಪ ದೇವರ ಸಹೋದರಿ ಪನ್ನಂಗಾಲ ತಮ್ಮೆಗೆ ಪೂಜೆಯನ್ನು ಸಲ್ಲಿಸಲಾಗುತ್ತದೆ. ಇಗ್ಗುತ್ತಪ್ಪ ದೇವಾಲಯದ ಜೀರ್ಣೋದ್ಧಾರ ಕಾರ್ಯ ಈಚೆಗೆ ನಡೆದು 5 ಕೋಟಿ ರೂಪಾಯಿ ವೆಚ್ಚದಲ್ಲಿ ದೇವಾಲಯ ನವೀಕರಣಗೊಂಡಿದೆ. 2004ರಿಂದ ಭಕ್ತಜನ ಸಂಘದ ಮೂಲಕ ದೇವಾಲಯದ ಜೀರ್ಣೋದ್ಧಾರ ಕಾರ್ಯ ನಡೆದಿದ್ದು ಸಾಕಷ್ಟು ಅಭಿವೃದ್ಧಿ ಕಾರ್ಯಗಳು ಭಕ್ತ ಜನರ ಸಹಕಾರದೊಂದಿಗೆ ಆಗಿದೆ.